ಕೋಲಾರ ಡಿಸ್ಟ್ರಿಕ್ಟ್ ಫಾರೆಸ್ಟ್ ಇಲಾಖಾ.

ತಾರೀಖು 16ನೆ ಜನವರಿ 1895.

1. ಇದರಿಂದ ಸಕಲ ಜನಗಳಿಗೂ ತಿಳಿಯ ಪಡಿಸುವದೇನಂದರೆ,—1878ನೆ ಇಸವಿ ಜೂ 8ನೇ ತಾರೀಖಿನ ಫಾರೆಸ್ಟ್ ರೂಲ್ಸ್ 13ನೆ ಸೆಕ್ಷ್ಯನ್ ಅನುಸರಿಸಿ ಈ ಕೆಳಗೆ ನಮೂದಿರುವ ಸ್ಟೇಟ್ ಫಾರೆಸ್ಟುಗಳು ಮತ್ತು ರಿಜರ್ವ್ ಫಾರೆಸ್ಟುಗಳು, ಫ್ರ್ಯಾಟೇರ್ಷ್‌ಗಳು 1895ನೇ ಇಸವಿ ಫೆಬ್ರವರಿ 1ರಲಾಗಾಯಿತು 1895ನೇ ಇಸವಿ ಮೇ ಆಖೈರು ವರಿಗೆ ಬಿಸಲು ಕಾಲದಲ್ಲಿ ಜನಗಳಿಗೆ ಎಂದ್ ಮಾಡ ಲ್ಪಟ್ಟು ಇರುತ್ತೆ.

2. ಈ ಮೇಲ್ಕಂಡ ಕಾಲದಲ್ಲಿ ಯಾವ ವಿಧವಾದ ಶಿಕಾರಿಯೂ ನಿರೋಧಿಸಲ್ಪಟ್ಟಿದೆ. ಅತಿಕ್ರಮ ಸ್ರವೇಕಮಾಡುವರು ಪ್ರಾಸಿಕ್ಯೂರ್ಷ್‌ಗೆ ಗುರಿಯಾದಾರು.

ನಂಬರು.	ಸ್ಟೇಟ್ ಫಾರೆಸ್ಟ್ ಅಥವ ಫ್ರ್ಯಾಟೇರ್ಷ್‌ಗಳ ಹೆಸರು.	ತಾಲ್ಲೂಕು.
	ಫಾರೆಸ್ಟುಗಳು.	
1	ನಂದೀದುರ್ಗ	ಚಿಕ್ಕಬಳ್ಳಾಪುರ
2	ನರಸಿಂಹ್ಮದೇವರಬೆಟ್ಟ	ಡಿಟೋ ಗೋರೀ ಬಿದನೂರು ಮತ್ತು ಗುಡಿಬಂಡೆ ಸಬ್ ತಾಲ್ಲೂಕು
3	ಕಾಮಸಂದ್ರ ಜಂಗಲ್ ಮತ್ತು ಅದರಲ್ಲಿ ಇರುವ ಫ್ರ್ಯಾಟೇರ್ಷ ..	ಬೌರಿಂಗ್‌ಪೇಟೆ ಮತ್ತು ಮಾಲೂರು
4	ರಾಯಲುಪಾಡು, ಅಡ್ಡಗಲ್ಲು, ನೆಲವಂಕಿ ಜಂಗಲುಗಳು ಮತ್ತು ಅವುಗಳಲ್ಲಿ ಇರುವ ಫ್ರ್ಯಾಟೇರ್ಷ್‌ಗಳು	ಚಿಂತಾಮಣೀ ತಾಲ್ಲೂಕು ಮತ್ತು ಶ್ರೀನಿವಾಸಪುರ ಸಬ್ ತಾಲ್ಲೂಕು
5	ಶ್ರೀನಿವಾಸಪುರ, ಯಲಬೂರು ಜಂಗಲ್ ಮತ್ತು ಅವುಗಳಲ್ಲಿ ಇರುವ ಫ್ರ್ಯಾಟೇರ್ಷ	ಶ್ರೀನಿವಾಸಪುರ ಸಬ್ ತಾಲ್ಲೂಕು ಮತ್ತು ಮುಳಬಾಗಲ್ ತಾಲ್ಲೂಕು
6	ಅಗರ ಜಂಗಲ್	ಮುಳಬಾಗಲು
7	ಹೊಸೂರು ಆಣಜಗಾನಹಳ್ಳಿ ಪಾಳ್ಯಗಾರ ಪೊದೆ	ಶ್ರೀನಿವಾಸಪುರ ಸಬ್ ತಾಲ್ಲೂಕು
8	ಇಟ್ಟಕಲ್ ದುರ್ಗ	ಬಾಗೇಪಲ್ಲಿ
9	ವಲಸೆ ಫಾರೆಸ್ಟು	ಗೋರೀಬಿದನೂರು
10	ಗದರ ಬೆಟ್ಟು ಮತ್ತು ಯಮ್ಮಗುಟ್ಟು ಜಂಗಲ್‌ಗಳು ಸಂದಲ್ ಪೇರಾವ್ ಆಗಿರತಕ್ಕ ಪ್ರದೇಶಮಾತ್ರನೆ	ಡಿಟೋ
	ಫ್ರ್ಯಾಟೇರ್ಷ್‌ಗಳು.	
11	ನಂದಿ	ಚಿಕ್ಕಬಳ್ಳಾಪುರ
12	ನೂಲಾಲಪ್ಪನ ದಿನ್ನೆ	ಡಿಟೋ
13	ಗಾಜಲದಿನ್ನೆ	ಕೋಲಾರ
14	ಸಂಗೊಂಡಹಳ್ಳಿ	ಡಿಟೋ
15	ಮಾಲೂರು	ಮಾಲೂರು
16	ಬೀಚಗಾನಹಳ್ಳಿ	ಗುಡಿಬಂಡೆ ಸಬ್ ತಾಲ್ಲೂಕು
17	ಪುಟ್ಟೇನಹಳ್ಳಿ	ಶಿಡ್ಲಘಟ್ಟ
18	ತಿರುಮಲಯ್ಯನ ದಿನ್ನೆ	ಡಿಟೋ
19	ಚವಡಸಂದ್ರ	ಡಿಟೋ
20	ಗೊರಮಡಗು	ಡಿಟೋ
21	ಯಲ್ಲಂಪಲ್ಲಿ	ಬಾಗೇಪಲ್ಲಿ

ಬಿ. ರಾಮಸ್ವಾಮಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟು ಆಫಿಸರ್ ಕೋಲಾರ್.

ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟ್ ಇಲಾಖಾ.

ಟೆಂಡರ್ ನೋಟೀಸ್.

ತಾರೀಖು (14—15ನೇ) ಜನವರಿ 1895ನೇ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ಸ್ಟೇಟ್ ರೈಲ್ವೆಯವರಿಂದ ರಿಜರ್ವ್ ಮಾಡಲ್ಪಟ್ಟ ಹಾಲಿ ಮೈಸೂರು ಉಡ್ಯಾರ್ಡಿನಲ್ಲಿ ಹಾಜರು ಇರತಕ್ಕ $4\frac{1}{2}$ ಮತ್ತು 5 ಅಂಗುಲಗಳ ಸ್ಲೀಪರುಗಳನ್ನೂ ಮತ್ತು ಒಳ್ಳೇ ಸ್ಲೀಪರುಗಳನ್ನೂ ಸಪ ಬಟ್ಟು ಖರೀದಿಗೆ ತೆಗದುಕೊಳ್ಳತಕ್ಕ ಬಗ್ಗೆ ದರಖಾಸ್ತುಗಳು ಸ್ರ 1895ನೇ ಇಸವಿ ಫಿಬ್ರವರಿ 20ರ ವರಿಗೆ ಮೈಸೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ ತೆಗದುಕೊಳ್ಳಲ್ಪಡುತ್ತೆ.

2. ಮೇಲೆ ನಮೂದಿಸಿರುವ ತಾರೀಖು ಕಳೆದ ನಂತರ ದರಖಾಸ್ತುಗಳು ತೆಗದುಕೊಳ್ಳಲ್ಪಡುವದಿಲ್ಲ.

3. $4\frac{1}{2}$ ಮತ್ತು 5 ಅಂಗುಲಗಳ ಬಾಬತು ನಕಾರೆ ಮತ್ತು ಒಳ್ಳೆ ಸ್ಲೀಪರುಗಳ ಖರೀದಿಗೆ ತೆಗದುಕೊಳ್ಳತಕ್ಕ ಬಗ್ಗೆ ದರಖಾ ಸ್ತು ಯಂಬದಾಗಿ ಲಿಫಾಫೆ ಮೇಲೆ ಬರಿಯಬೇಕು.

4. ಟೆಂಡರ್ ಜೊತೇಲಿ ಯರಡು ನೂರು ರೂಪಾಯಿಗಳು ನಗದಾಗಿಯೇ ಆಗಲಿ ನೋಟ್ ಅಥವಾ ಗವರ್ನಮೆಂಟ್ ಪ್ರೋಸೋಟ್ ಮೂಲಕವಾಗಿಯೇ ಆಗಲಿ ಬಾರದೆ ಇದ್ದಲ್ಲಿ ಅಂಥಾ ಟೆಂಡರನ್ನ ಅಂಗೀಕರಿಸಲ್ಪಡುವದಿಲ್ಲ.